■ ಹನಿ

## ಕೊಲೆಯ ಆರೋಪಿ



‘ಬ್ಲೇಡ್ ರನ್ನರ್’ ಎಂದೇ ಖ್ಯಾತಿ ಹೊಂದಿರುವ ವಿಶ್ವದಾಖಲೆಯ ಓಟದ ವೀರ ಆಸ್ಕರ್ ಪಿಸ್ಟೋರಿಯಸ್ ತನ್ನ ಗೆಳತಿ ರೀವಾ ಸ್ಟೀನ್‌ಕ್ಯಾಂಪ್ ಳನ್ನು ಉದ್ದೇಶಪೂರ್ವಕವಾಗಿ ಗುಂಡಿಟ್ಟು ಕೊಂದನೆ.. ಅಥವಾ ಇದೊಂದು ಆಕಸ್ಮಿಕ ಗುಂಡು ಹಾರಾಟವೆ? ಈ ಮಿಲಿಯನ್ ಡಾಲರ್ ಪ್ರಶ್ನೆಗೆ ಉತ್ತರ ಕಂಡು ಹಿಡಿಯುವುದು ಪೊಲೀಸರ ಕೆಲಸ. ಸದ್ಯಕ್ಕಂತೂ ಪೊಲೀಸರ ಬಂಧನಕ್ಕೆ ಒಳಗಾಗಿ ಜಾಮೀನು ಹೋರಾಟ ನಡೆಸಿರುವ ಪಿಸ್ಟೋರಿಯಸ್, ತನ್ನ ನಿರಪರಾಧಿತ್ವವನ್ನು ಸ್ಥಾಪಿಸುವುದು ಅಷ್ಟು ಸುಲಭವಲ್ಲ. ಕೋರ್ಟ್‌ನಲ್ಲಿ ತಲೆ ಹಿಡಿದುಕೊಂಡು ಗಳಗಳನೆ ಅತ್ತಿರುವ ಪಿಸ್ಟೋರಿಯಸ್ ತಾನು ನಿರಪರಾಧಿ ಎಂದೇ ಹೇಳಿದ್ದಾನೆ. ಆದರೆ ರೀವಾಳ ಸಾವಿನ ಬಳಿಕ ಹೊರಬರುತ್ತಿರುವ ಸುದ್ದಿಗಳು ಪಿಸ್ಟೋರಿಯಸ್ ಬಗ್ಗೆ ಬೇರೆಯದೇ ಕಥೆಗಳನ್ನು ಹೇಳುತ್ತಿವೆ.

“ಆತನಿಗೆ ಹುಡುಗಿಯರ, ಕಾರುಗಳ ಮತ್ತು ವೇಗದ ಬದುಕಿನ ಶೋಕಿ ಇತ್ತು. ಈ ಹಿಂದಿನ ಆತನ ಗರ್ಲ್‌ಫ್ರೆಂಡ್‌ಗಳನ್ನು ಕೇಳಿದರೆ ಅವರೇಕೆ ಆತನಿಂದ ದೂರವಾದರು ಎಂಬುದರ ವಿವರ ನೀಡುತ್ತಾರೆ. ಈ ಹಿಂದೆ ಗೆಳತಿಯೊಬ್ಬಳಿಗೆ ಹೊಡೆದು ಒಂದು ದಿನ ಜೈಲುವಾಸ ಅನುಭವಿಸಿದ್ದಾನೆ” ಎಂದೆಲ್ಲ ಈಗ ಆತನನ್ನು ‘ಬಲ್ಲವರು’ ಹೇಳುತ್ತಿದ್ದಾರೆ. ಒಬ್ಬ ಮಾಜಿ ಗೆಳತಿಯನ್ನು ಬಿಟ್ಟರೆ ಉಳಿದವರೆಲ್ಲ ಈಗ ಆತನ ವಿರುದ್ಧ ತಿರುಗಿ ಬಿದ್ದಿದ್ದಾರೆ.

ಹಣ ಮತ್ತು ಖ್ಯಾತಿಯ ಉತ್ತುಂಗಕ್ಕೆ ವ್ಯಕ್ತಿಯೊಬ್ಬ ಏರಿದಾಗ ಆತನ ವ್ಯಕ್ತಿತ್ವದ ಕಪ್ಪು ಕಲೆಗಳು ಗೋಚರಿಸುವುದೇ ಇಲ್ಲ. ಅಥವಾ ಅಭಿಮಾನದ ಹುಚ್ಚುಹೊಳೆಯಲ್ಲಿ ಅವೆಲ್ಲವೂ ತೇಲಿಕೊಂಡು ಹೋಗುತ್ತವೆ. ಆದರೆ ಪಿಸ್ಟೋರಿಯಸ್‌ನ ಖ್ಯಾತಿ ಅಷ್ಟೊಂದು ಸರಾಗವಾಗಿ ಬಂದದ್ದಲ್ಲ. ಮೊಣಕಾಲಿನಿಂದ ಕೆಳಗೆ ಎರಡೂ ಕಾಲುಗಳಿಲ್ಲದ ಪಿಸ್ಟೋರಿಯಸ್, ಕಾರ್ಬನ್ ಫೈಬರ್ ಕಾಲುಗಳನ್ನು ಕಟ್ಟಿಕೊಂಡು ಓಟ ಕಲಿತವನು. ವಿಕಲಾಂಗರ ಸ್ಪೆಶಲ್ ಒಲಿಂಪಿಕ್ಸ್‌ನಲ್ಲಿ 100 ಮೀ., 200 ಮೀಟರ್ ಜಾಗತಿಕ ಓಟಗಳಲ್ಲಿ ಈತ ಸ್ವರ್ಣ ಪದಕಗಳನ್ನು ಗೆಲ್ಲುವವರೆಗೆ ಅಜ್ಞಾತನಾಗಿಯೇ ಇದ್ದವನು. ಒಲಿಂಪಿಕ್ಸ್‌ನಲ್ಲಿ 400 ಮೀಟರ್ ಓಟ ಮತ್ತು 100X4 ರಿಲೇ ಓಟದಲ್ಲಿ ವಿಶ್ವದಾಖಲೆಯನ್ನು ಹೊಂದಿರುವ ಪಿಸ್ಟೋರಿಯಸ್‌ಗೆ ಇವತ್ತಿನ ಖ್ಯಾತಿಗೆ ಅರ್ಹ ಕೂಡಾ. ಅದರಲ್ಲೂ ಅಂಗಾಂಗಗಳು ಸರಿ ಇರುವ ಓಟಗಾರರ ಜತೆಗೇ ಓಡಿ ಮೊದಲ ಸ್ಥಾನ ಗಳಿಸಿದ್ದು; ಒಲಿಂಪಿಕ್ಸ್‌ನಲ್ಲಿ ದಕ್ಷಿಣ ಆಫ್ರಿಕಾದ ಕಾಲು ಸರಿ ಇರುವ ಇತರ ಓಟಗಾರರ ಜತೆ ಸೇರಿ ರಿಲೇ ಓಡಲು ಅರ್ಹತೆ ಗಳಿಸಿ ಅಲ್ಲೂ ಸ್ವರ್ಣ ಗೆಲ್ಲಲು ಕಾರಣನಾದದ್ದು ಈತನ ಅಗಾಧ ಛಲಕ್ಕೆ ಸಾಕ್ಷಿ. ಅದಕ್ಕೆಂದೇ ಇಡೀ ದಕ್ಷಿಣ ಆಫ್ರಿಕಾ ಆತನನ್ನು ಆರಾಧಿಸುತ್ತಿತ್ತು.

ಪದೇ ಪದೇ ಗರ್ಲ್‌ಫ್ರೆಂಡ್‌ಗಳನ್ನು ಬದಲಾಯಿಸುತ್ತಿದ್ದುದು ಆತನಿಗೆ ಅಂಗವೈಕಲ್ಯ ಹುಟ್ಟಿಸಿರುವ ಅವ್ಯಕ್ತ ಕೀಳರಿಮೆಯ ಕಾರಣದಿಂದ ಇರಬಹುದೆ? ಮಲಗುವ ಕೋಣೆಯಲ್ಲಿ ಸದಾ ಗನ್‌ಗಳನ್ನು ಇಟ್ಟುಕೊಳ್ಳುತ್ತಿದ್ದುದು ಶ್ರೀಮಂತಿಕೆ ತಂದುಕೊಟ್ಟಿರುವ ಸೊಕ್ಕಿನಿಂದ ಅಥವಾ ಜೀವಭಯದಿಂದ ಇರಬಹುದೆ? ಈ ಪ್ರಶ್ನೆಗಳಿಗೆ ಉತ್ತರ ಅಷ್ಟು ಸುಲಭವಿಲ್ಲ. ಆದರೆ ಕೋರ್ಟ್‌ನಲ್ಲಿ ಮೊನ್ನೆ ಆತನ ಅಳುವನ್ನು ನೋಡಿದಾಗ ‘ಈತ ನಿರಪರಾಧಿ ಆಗಿರಲೂಬಹುದು’ ಎನ್ನುವ ಸಂಶಯ ಹುಟ್ಟಿದ್ದು ಸುಳ್ಳಲ್ಲ. ಆದರೆ ‘ಅಳುವ ಗಂಡಸರನ್ನು ನಂಬಬಾರದು’ ಎಂಬ ಗಾದೆಯೇ ಇದೆಯಲ್ಲ? ●

## ಬೈಚುಂಗ್ ಮಾದರಿ



ಸಾಮಾನ್ಯವಾಗಿ ಕ್ರೀಡೆಯಿಂದ ನಿವೃತ್ತರಾದ ಸ್ಟಾರ್ ಆಟಗಾರರೆಲ್ಲ ಬಳಿಕ ಮೊರೆ ಹೋಗುವುದು ಕೋಚಿಂಗ್‌ಗೆ. ಎಳೆಯರನ್ನು ಕೋಚ್ ಮಾಡುತ್ತಲೇ ನಿವೃತ್ತಿಯ ಬಳಿಕವೂ ಹಣ ಗಳಿಸಲು ಇದು ಇತ್ತೀಚಿನ ಅತ್ಯುತ್ತಮ ದಾರಿ. ಕ್ರಿಕೆಟ್‌ನಲ್ಲಾದರೆ ವೀಕ್ಷಕ ವಿವರಣೆಯಿಂದಲೂ ಹಣ ಗಳಿಸಬಹುದು. ಇತರ ಆಟಗಳಲ್ಲಿ ಅದಕ್ಕೆ ಅವಕಾಶ ಕಡಿಮೆ. ಫುಟ್‌ಬಾಲ್ ಕ್ಷೇತ್ರದಲ್ಲಿ ಭಾರತದ ಅದ್ಭುತ ಸ್ಟಾರ್ ಎಂದೇ ಈಗಲೂ ಪರಿಗಣಿಸಲ್ಪಡುವ ಬೈಚುಂಗ್ ಭುಟಿಯಾ ಮಾತ್ರ ಕೋಚಿಂಗ್‌ನ ಹೊರತಾಗಿ ಭಿನ್ನ ದಾರಿಯೊಂದನ್ನು ತುಳಿದಿದ್ದಾರೆ. ಅವರ ನೇತೃತ್ವದ ‘ಯೂನಿವರ್ಸಿಟಿ ಫುಟ್‌ಬಾಲ್ ಲೀಗ್’ ಮೊನ್ನೆ ಮುಂಬೈಯಲ್ಲಿ ಅಸ್ತಿತ್ವಕ್ಕೆ ಬಂದಿದೆ. ‘ಕಾಲೇಜು ಮಟ್ಟದಲ್ಲೇ ಪ್ರತಿಭಾವಂತ ಫುಟ್‌ಬಾಲ್ ಪಟುಗಳನ್ನು ಗುರುತಿಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ತರಬೇತಿಗೊಳಿಸಬೇಕು’ ಎನ್ನುವುದು ಭುಟಿಯಾ ಕನಸು.

ಬೈಚುಂಗ್ ಭುಟಿಯಾ (ಬರ್ತ್‌ಡೇ: 15/12/1976) 99ರಲ್ಲಿ ಬುರಿ ಕ್ಲಬ್‌ನಲ್ಲಿ ಆಡುವ ಮೂಲಕ ಯೂರೋಪಿನ ಕ್ಲಬ್‌ನಲ್ಲಿ ವೃತ್ತಿಪರ ಆಟಗಾರನಾದ ಮೊದಲ ಭಾರತೀಯ ಫುಟ್‌ಬಾಲಿಗ. 107 ಅಂತರ-ರಾಷ್ಟ್ರೀಯ ಪಂದ್ಯಗಳಲ್ಲಿ 43 ಗೋಲುಗಳನ್ನು ಹೊಡೆದ ಅದ್ವಿತೀಯ ಫಾರ್ವರ್ಡ್ ಸ್ಟ್ರೈಕರ್. 36ರ ಹರೆಯದ ಭುಟಿಯಾ ಕಳೆದ ವರ್ಷದ ಜನವರಿಯಲ್ಲೇ ಆಟದಿಂದ ನಿವೃತ್ತಿ ಹೊಂದಿದ್ದು, ಇದೀಗ ಪ್ರತಿಭೆಗಳನ್ನು ಹುಡುಕಿ ತೆಗೆಯುವ ಕೆಲಸಕ್ಕಾಗಿ ದೇಶಾದ್ಯಂತ ಓಡಾಡಲು ನಿರ್ಧರಿಸಿದ್ದಾರೆ. ‘ನಮ್ಮಲ್ಲಿ ಅತ್ಯುತ್ತಮ ಫುಟ್‌ಬಾಲ್ ಪ್ರತಿಭೆಗಳಿವೆ; ಆದರೆ ಅವರಿಗೆ ಸೂಕ್ತ ಸಮಯದಲ್ಲಿ ಅವಕಾಶ ಮತ್ತು ತರಬೇತಿ ಸಿಗುತ್ತಿಲ್ಲ’ ಎನ್ನುವ ಭುಟಿಯಾ ನೋವು ದೇಶದ ಫುಟ್‌ಬಾಲ್ ಕ್ಷೇತ್ರಕ್ಕೆ ಹಿಡಿದ ಕೈಗನ್ನಡಿ. ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65